**1 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

| | |
|---|---|
| **LAC Misc No:** | **57/2023** |

| | | |
|---|---|---|
| ಸಾಕ್ಷಿದಾರರ ಹೆಸರು | ಆರ್ ಶ್ರೀನಿವಾಸ್ | |
| ತಂದೆಯ ಹೆಸರು | ರಾಮಯ್ಯ | |
| ವಯಸ್ಸು | 58 ವರ್ಷ | |
| ಉದ್ಯೋಗ | ವ್ಯವಸಾಯ | **RW.1** |

| | | |
|---|---|---|
| ವಾಸ ಸ್ಥಳ | ಯಡವನಹಳ್ಳಿ ಗ್ರಾಮ, ಆನೇಕಲ್ ತಾಲ್ಲೂಕು. | ಸಾಕ್ಷಿಗೆ ದಿಃ 06.03.2024 ರಂದು ಪ್ರಮಾಣ ವಚನ ಭೋಧಿಸಲಾಯಿತು. |

**ಮುಂದುವರಿದ ಮುಖ್ಯ ವಿಚಾರಣೆಃ ಎದುರುದಾರ ಪರ ಶ್ರೀ ಆರ್.ಕೆ ವಕೀಲರಿಂದಃ**

5. ಗೇಣಿ ರಹಿತ ದೃಡೀಕರಣ ಪತ್ರವನ್ನು ನಿಶಾನೆ ಆರ್ -30 ಎಂದು ಗುರ್ತಿಸಲಾಯಿತು. ದಿನಾಂಕ 24.03.2011 ರ ನೊಂದಾಯಿತ ಕ್ರಯ ಪತ್ರವನ್ನು ನಿಶಾನೆ ಆರ್-31 ಎಂದು ಗುರ್ತಿಸಲಾಯಿತು. ಮೂಲದಾವೆ ಸಂಖ್ಯೆ 549/2013 ರ ಆರ್ಡರ್ ಶೀಟ್ ನ ನಕಲನ್ನು ನಿಶಾನೆ ಆರ್-32 ಎಂದು ಗುರ್ತಿಸಲಾಯಿತು. ಮೂಲದಾವೆ ಸಂಖ್ಯೆ 549/2013 ರ ವಾದಪತ್ರದ ನಕಲನ್ನು ನಿಶಾನೆ ಆರ್-33 ಎಂದು ಗುರ್ತಿಸಲಾಯಿತು. ಮೂಲದಾವೆ ಸಂಖ್ಯೆ 549/2013 ರ Withdrawal memo ನ ನಕಲನ್ನು ನಿಶಾನೆ ಆರ್-34 ಎಂದು ಗುರ್ತಿಸಲಾಯಿತು.

6. ಮೂಲದಾವೆ ಸಂಖ್ಯೆ 350/2013 ರ ಆರ್ಡರ್ ಶೀಟ್ ನ ನಕಲನ್ನು ನಿಶಾನೆ ಆರ್-35 ಎಂದು ಗುರ್ತಿಸಲಾಯಿತು. ಮೂಲದಾವೆ ಸಂಖ್ಯೆ 350/2013 ರ ವಾದಪತ್ರದ ನಕಲನ್ನು ನಿಶಾನೆ ಆರ್-36 ಎಂದು ಗುರ್ತಿಸಲಾಯಿತು. ಮೂಲದಾವೆ ಸಂಖ್ಯೆ 350/2013 ರ Withdrawal memo ನ ನಕಲನ್ನು ನಿಶಾನೆ ಆರ್-37 ಎಂದು ಗುರ್ತಿಸಲಾಯಿತು. ಮೂಲದಾವೆ ಸಂಖ್ಯೆ 734/2011 ರ ಆರ್ಡರ್ ಶೀಟ್ ನ ನಕಲನ್ನು ನಿಶಾನೆ ಆರ್-38 ಎಂದು ಗುರ್ತಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಕೆ ಆರ್ ವಕೀಲರಿಂದಃ**

7. ದಾವಾ ಸಂಖ್ಯೆ 549/2013, 350/2013 ಮತ್ತು 734/2011 ಗಳಲ್ಲಿ ಸ್ಪೆಷಲ್ ಎಸ್ ಎಲ್ ಓ ಹೌಸಿಂಗ್ ಬೋರ್ಡ್ ಅನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ ಇದೆ. ಈ ಜಮೀನು ಪಿಟಿಸಿಎಲ್ ಕಾಯ್ದೆ (Prohibition of transfer of

certain lands Act) ಗೆ ಒಳಪಟ್ಟಿಲ್ಲ ಎಂದು ಪ್ರಮಾಣ ಪತ್ರ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರಿದು ಈ ಜಮೀನು ಪಿಟಿಸಿಎಲ್ ಕಾಯ್ದೆಗೆ ಒಳಪಟ್ಟಿಲ್ಲ ಎಂದು ಹೇಳುತ್ತಾರೆ. ಆಸ್ತಿ ಭೂಸ್ವಾಧೀನ ಪಡಿಸಿಕೊಂಡ ಬಗ್ಗೆ ನಾವು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ.

8. ಕೃಷಿ ಪಟ್ಟಾ ಪುಸ್ತಕ ನನ್ನ ಬಳಿ ಇರುವುದಿಲ್ಲ. ನಾನು ಜಮೀನನ್ನು 20.05.2013 ರಂದು ಖರೀದಿ ಮಾಡಿರುತ್ತೇನೆ. ನನ್ನ ಮನೆತನದ ಹಾಗೂ ಜಮೀನು ಮಾರಾಟ ಮಾಡಿದವರ ಮನೆತನದ ವಂಶವೃಕ್ಷವನ್ನು ತಹಶೀಲ್ದಾರ್ ರವರಿಂದ ಪಡೆದು ಹಾಜರುಪಡಿಸಲು ನಿಮಗೆ ತೊಂದರೆ ಇದೆಯಾ ಎಂದು ಕೇಳಿದ್ದಕ್ಕೆ ಸಾಕ್ಷಿ ಮಾರಾಟ ಮಾಡಿದವರ ಮನೆತನದ ವಂಶವೃಕ್ಷವನ್ನು ತಂದು ಕೊಡಲು ಆಗುವುದಿಲ್ಲ, ನನ್ನ ಮನೆತನದ ವಂಶವೃಕ್ಷವನ್ನು ತಂದು ಹಾಜರುಪಡಿಸುತ್ತೇನೆ. ಕಂದಾಯ ಕಟ್ಟಿದ ಬಗ್ಗೆ ನನ್ನ ಹತ್ತಿರ ದಾಖಲೆ ಇರುವುದಿಲ್ಲ. ಗ್ರಾಂಟ್ ಆದೇಶದ ಮೂಲ ದಾಖಲೆ ಹಾಜರುಪಡಿಸಲು ತೊಂದರೆ ಇದೆಯಾ ಎಂದು ಕೇಳಿದ್ದಕ್ಕೆ ಸಾಕ್ಷಿ ನಾನು ಈಗಾಗಲೇ ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ. ನಾನು ಜಮೀನಿನ ಮಾಲೀಕನಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.